ಅಧ್ಯಕ್ಷರು: ತಾವು ಕೂಡ್ರಿ ಮಾರಾಯ್ರೆ. ನೀವು ಬರೆದು ಕಳುಹಿಸಿ, ನಾನು ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೇನೆ. ಬೇರೆ ನೋಟೀಸ್ ಕೊಡಿ.....

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೇ, ವಿಷಯ ಬಹಳ ಗಂಭೀರದ್ದಾದರೆ ಅದರ ಬಗ್ಗೆ ಚರ್ಚೆ ಮಾಡಬೇಕು. ನಮ್ಮ ಪ್ರಶ್ನೆ ಏನಿದೆ ಎಂದರೆ ಪ್ರಶ್ನೋತ್ತರ ಕಾಲದಲ್ಲಿ.....

(ಗೊಂದಲ)

ಶ್ರೀ ಎಸ್.ಎಸ್.ಪಾಟೀಲ್: ಶೆಟ್ಟರ್ ಅವರು ಈಗ ನೋಟೀಸ್ ಕೊಡುತ್ತಾರೆ.

ಶ್ರೀ ಜಗದೀಶ ಶೆಟ್ಟರ್: ಅರ್ಧಗಂಟೆ ಚರ್ಚೆಗೆ ನಾನು ನೋಟೀಸ್ ಕೊಡುತ್ತೇನೆ.

ಅಧ್ಯಕ್ಷರು: ಆಯಿತು, ನೀವು ಬರೆದು ಕಳುಹಿಸಿ ಅರ್ಧಗಂಟೆ ಚರ್ಚೆ ಇಟ್ಟುಕೊಳ್ಳೋಣ. ಅದನ್ನು ಬೇಕಾದರೆ ಮತ್ತೆ ಅರ್ಧಗಂಟೆಗೆ ಮುಂದುವರೆಸೋಣ. ಮುಂದಿನ ಪ್ರಶ್ನೆ ಜೆ.ಟಿ.ಪಾಟೀಲರದ್ದು.....

(ಗೊಂದಲ)

ಅಧ್ಯಕ್ಷರು: ಈಗ ಚರ್ಚೆ ಬೇಡ. ಇದರ ಬಗ್ಗೆ ಅರ್ಧಘಂಟೆ ಚರ್ಚೆ ಇಟ್ಟುಕೊಳ್ಳೋಣ. ಬೇಕಾದರೆ ಅರ್ಧಘಂಟೆ ಹೆಚ್ಚಿಗೆ ಚರ್ಚೆ ಮಾಡೋಣ. ಇದು ಇಲ್ಲಿಗೆ ಸಾಕು. ಮುಂದಿನ ಪ್ರಶ್ನೆ ಜೆ.ಟಿ. ಪಾಟೀಲರದ್ದು.

ರಾಜ್ಯದಲ್ಲಿ ಗ್ರಾಮ ಪಂಚಾಯತಿಗಳಿಗೆ ಗ್ರಂಥಾಲಯಗಳನ್ನು ಮಂಜೂರು ಮಾಡುವ ಬಗ್ಗೆ.

200(2297)

ಶ್ರೀ ಪಾಟೀಲ್ ಜೆ.ಟಿ.(ಬೀಳಗಿ): ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ತಮ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗ್ರಂಥಾಲಯಗಳನ್ನು ಹೊಂದದೇ ಇರುವ ಗ್ರಾಮ ಪಂಚಾಯತಿಗಳ ಸಂಖ್ಯೆ ಎಷ್ಟು; ವಿವರಣೆ ನೀಡುವುದು;

ಆ) ಗ್ರಂಥಾಲಯ ಇರದೇ ಇರುವ ಗ್ರಾಮ ಪಂಚಾಯತಿಗಳಿಗೆ ಗ್ರಂಥಾಲಯಗಳನ್ನು ಮಂಜೂರು ಮಾಡುವ ವಿಚಾರ ಸರ್ಕಾರದ ಮುಂದಿದೆಯೆ;

ಇ) ಈ ಯೋಜನೆ ರೂಪಿಸಿಕೊಂಡು ಎಷ್ಟು ವರ್ಷಗಳಲ್ಲಿ ಪ್ರತಿಯೊಂದು ಗ್ರಾಮ ಪಂಚಾಯ್ತಿಗೂ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗುವುದು?

ಶ್ರೀ ಬಾಬುರಾವ್ ಚವ್ವಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು):

ಅ) ರಾಜ್ಯದಲ್ಲಿ 2908 ಗ್ರಾಮ ಪಂಚಾಯಿತಿ ಕೇಂದ್ರಗಳಲ್ಲಿ ಗ್ರಂಥಾಲಯಗಳಿರುವುದಿಲ್ಲ. ಅವುಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ಹೌದು.

ಇ) ಹಣಕಾಸಿನ ಲಭ್ಯತೆಯ ಮೇರೆಗೆ ಹಂತ ಹಂತವಾಗಿ ಎಲ್ಲಾ ಗ್ರಾಮ ಪಂಚಾಯಿತಿ ಕೇಂದ್ರಗಳಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಅನುಬಂಧ

ರಾಜ್ಯದಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸಬೇಕಾಗಿರುವ ಗ್ರಾಮಪಂಚಾಯಿತಿ ಕೇಂದ್ರಗಳು.

ಜಿಲ್ಲೆ	ಸಂಖ್ಯೆ
1) ಬೆಂಗಳೂರು ನಗರ	37
2) ಬೆಂಗಳೂರು ಗ್ರಾಮಾಂತರ	110
3) ಕೋಲಾರ	158
4) ತುಮಕೂರು	180
5) ಚಿತ್ರದುರ್ಗ	85
6) ಶಿವಮೊಗ್ಗ	152
7) ಮೈಸೂರು	111
8) ಮಂಡ್ಯ	83
9) ಹಾಸನ	155
10) ಚಿಕ್ಕಮಗಳೂರು	117
11) ಮಡಿಕೇರಿ	36
12) ಮಂಗಳೂರು	137
13) ಉಡುಪಿ	106
14) ಚಾಮರಾಜನಗರ	73
15) ಬೆಳಗಾವಿ	319
16) ಧಾರವಾಡ	63

17) ಕಾರವಾರ	73
18) ಬಿಜಾಪುರ	115
19) ಹಾವೇರಿ	129
20) ಗದಗ್	47
21) ಬಾಗಲ್‌ಕೋಟೆ	66
22) ಗುಲ್ಬರ್ಗಾ	183
23) ಬೀದರ್	64
24) ರಾಯಚೂರು	102
25) ಕೊಪ್ಪಳ	61
26) ದಾವಣಗೆರೆ	102
27) ಬಳ್ಳಾರಿ	44
	2,908

ಶ್ರೀ ಜೆ.ಟಿ.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಇನ್ನೂ 2908 ಗ್ರಾಮ ಪಂಚಾಯತಿಗಳಿಗೆ ಗ್ರಂಥಾಲಯಗಳು ಇರುವುದಿಲ್ಲ ಎಂದು ಮಾಹಿತಿ ಕೊಟ್ಟಿದ್ದಾರೆ. ಉಳಿದ ಪಂಚಾಯತಿಗೆ ಗ್ರಂಥಾಲಯ ಕೊಡುವುದಕ್ಕೆ ನಿಮ್ಮಲ್ಲಿ ಏನಾದರೂ ಯೋಜನೆ ಇದೆಯೇ ಎಂದು ಕೇಳಿದ್ದಕ್ಕೆ 'ಹೌದು' ಎಂದು ಉತ್ತರ ಕೊಟ್ಟು ಕೊನೆಗೆ ಹಣಕಾಸಿನ ಲಭ್ಯತೆ ಮೇರೆಗೆ ಹಂತಹಂತವಾಗಿ ಮುಂದೆ ಬರುವ ದಿವಸಗಳಲ್ಲಿ ಮಾಡುತ್ತೇವೆ ಎಂದು ಹಾರಿಕೆಯ ಉತ್ತರ ಕೊಟ್ಟಿದ್ದಾರೆ. ಅದಕ್ಕೆ ನಿಖರವಾಗಿ ಏನಾದರೂ ಒಂದು ಆದ್ಯತೆ ಕೊಟ್ಟು ಹೇಳಬೇಕು. ಈಗ ಗ್ರಂಥಾಲಯಗಳ ಅವಶ್ಯಕತೆ ಬಹಳವಾಗಿ ಇದೆ. ಬೇರೆಬೇರೆ ಮಾಧ್ಯಮಗಳ ಮುಖಾಂತರ ಮಾಹಿತಿ ತಿಳಿದುಕೊಳ್ಳಬೇಕಾದರೆ ಗ್ರಂಥಾಲಯಗಳ ಅವಶ್ಯಕತೆ ಇದೆ. ಆದ್ದರಿಂದ ಇನ್ನು ಎರಡು-ಮೂರು ವರ್ಷಗಳೊಳಗೆ ಉಳಿದ ಮೂರು ಸಾವಿರ ಗ್ರಾಮ ಪಂಚಾಯಿತಿಗಳಿಗೆ ಗ್ರಂಥಾಲಯಗಳನ್ನು ಒದಗಿಸುವ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳುತ್ತದೆಯೇ ಎಂದು ನಾನು ಕೇಳುತ್ತೇನೆ.

ಶ್ರೀ ಬಾಬುರಾವ್ ಚವ್ವಾಣ್: ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಒಟ್ಟು ಗ್ರಾಮಪಂಚಾಯತಿಗಳ ಸಂಖ್ಯೆ 5659 ಇದೆ. ಇದರಲ್ಲಿ ನಾವು ಇಲ್ಲಿಯವರೆಗೆ ತೆಗೆಯಲಾದ ಗ್ರಂಥಾಲಯಗಳ ಸಂಖ್ಯೆ 2751. ಇನ್ನೂ ಪ್ರಾರಂಭ ಮಾಡಬೇಕಾದ ಗ್ರಾಮಪಂಚಾಯತಿ ಗ್ರಂಥಾಲಯಗಳ ಸಂಖ್ಯೆ 2908. ಪ್ರತಿವರ್ಷ ಐದುನೂರು ಗ್ರಾಮಂಚಾಯತಿಯಂತೆ ಈ ವರ್ಷ ಕೂಡ ಐದುನೂರು ಗ್ರಾಮಪಂಚಾಯತಿಗಳಿಗೆ ಗ್ರಂಥಾಲಯಗಳನ್ನು ಕೊಡತಕ್ಕಂಥ ವಿಚಾರ ಸರ್ಕಾರದ ಮಟ್ಟದಲ್ಲಿದೆ. ನಾವು ಈ ವರ್ಷ ಐದುನೂರು ಗ್ರಾಮಪಂಚಾಯತಿಗಳಿಗೆ ಕೊಡುತ್ತೇವೆ.

ಶ್ರೀ ಎಸ್.ಎಸ್.ಪಾಟೀಲ್: ಅಧ್ಯಕ್ಷರೇ, ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ ಈಗ ಐದುನೂರು ಗ್ರಂಥಾಲಯಗಳನ್ನು ಏನು ಕೊಡುತ್ತೀರಿ, ಕೆಲವು ತಾಲ್ಲೂಕುಗಳಲ್ಲಿ ಈಗಾಗಲೇ ಹೆಚ್ಚು ಇವೆ ಮತ್ತು ಕೆಲವು ತಾಲ್ಲೂಕುಗಳಲ್ಲಿ ಗ್ರಂಥಾಲಯಗಳ ಸಂಖ್ಯೆ ಕಡಿಮೆ ಇದೆ. ಎಲ್ಲಾ ತಾಲ್ಲೂಕುಗಳಿಗೂ ಗ್ರಂಥಾಲಯಗಳನ್ನು ಸರಿಸಮಾನವಾಗಿ ಕೊಡಬೇಕು. ಇಲ್ಲದಿದ್ದರೆ ಯಾರ್ಯಾರು ಮುಂದೆ ಬರುತ್ತಾರೆ ಅವರಿಗೆ ಕೊಟ್ಟುಕೊಂಡು ಹೋಗುವುದು ನಡೆದಿದೆ. ಅದು ಆಗದ ಹಾಗೆ ಯಾವ ತಾಲ್ಲೂಕುಗಳಿಗೆ ಕಡಿಮೆ ಇದೆ, ಆ ತಾಲ್ಲೂಕುಗಳಿಗೆ ಹೆಚ್ಚು ಗ್ರಂಥಾಲಯಗಳನ್ನು ಕೊಟ್ಟು ಸರಿಸಮಾನವಾಗಿ ಹಂಚುತ್ತೀರಾ ಎಂಬುದನ್ನು ಕೂಡ ಹೇಳಬೇಕು.

ಶ್ರೀ ಬಾಬುರಾವ್ ಚವ್ವಾಣ್: ವಿಧಾನಸಭೆ ಮತಕ್ಷೇತ್ರವಾರು ಎಲ್ಲಾ ಪಟ್ಟಿಯನ್ನು ತರಿಸಿ ಇಟ್ಟುಕೊಂಡಿದ್ದೇವೆ. ಎಲ್ಲಾ ಶಾಸಕರಿಗೆ ಸರಿಸಮಾನವಾಗಿ ಕೊಡತಕ್ಕಂಥ ವ್ಯವಸ್ಥೆಯನ್ನು ಸರ್ಕಾರದಿಂದ ನಾವು ಮಾಡುತ್ತೇವೆ.

ಶ್ರೀ ಕೆ.ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೇ, ಈ ಗ್ರಂಥಾಲಯಗಳಿಗೆ ಇಂತಿಂಥ ಪುಸ್ತಕಗಳನ್ನು ಕೊಡಬೇಕು ಎಂದು ಏನಾದರೂ ಮಾರ್ಗಸೂಚಿ ಇದೆಯೇ ಎಂದು ನಾನು ಕೇಳುತ್ತೇನೆ. ಏಕೆಂದರೆ ನನ್ನ ಸ್ವಂತ ಊರಿನಲ್ಲಿ 1960ರಲ್ಲಿ ಒಂದು ಗ್ರಂಥಾಲಯ ಬಂತು. ಆಗ ಒಂದು ಕಾಮಶಾಸ್ತ್ರ ಪುಸ್ತಕವನ್ನು ಅಲ್ಲಿ ಕೊಟ್ಟಿದ್ದರು. ಅದೇತರಹ ಪುಸ್ತಕಗಳನ್ನು ಕೊಡುತ್ತೀರಾ ಅಥವಾ ಬೇರೆ ಪುಸ್ತಕಗಳನ್ನು ಕೊಡುವಂಥ ವಾಡಿಕೆಯನ್ನು ಏನಾದರೂ ಇಟ್ಟುಕೊಂಡಿದ್ದೀರಾ ಎಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಬಾಬುರಾವ್ ಚವ್ವಾಣ್: ಗ್ರಂಥಾಲಯಗಳಲ್ಲಿ ಪುಸ್ತಕಗಳನ್ನು ತರಿಸುವ ವ್ಯವಸ್ಥೆ ಬಗ್ಗೆ ರಾಜ್ಯಮಟ್ಟದಲ್ಲಿ ಒಂದು ಪುಸ್ತಕಗಳ ಆಯ್ಕೆ ಸಮಿತಿ ಇದೆ. ಈ ಸಮಿತಿಯವರು ಯಾವ ಪುಸ್ತಕಗಳನ್ನು ಆಯ್ಕೆ ಮಾಡುತ್ತಾರೆ, ಆ ಪುಸ್ತಕಗಳ ಪಟ್ಟಿಯನ್ನು ಗ್ರಂಥಾಲಯಗಳಿಗೆ ಕಳುಹಿಸಿಕೊಡುತ್ತೇವೆ. ಆ ಪಟ್ಟಿಯಲ್ಲಿರುವ ಪುಸ್ತಕಗಳನ್ನು ಮಾತ್ರ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಶ್ರೀನಿವಾಸಗೌಡ: ಇದರಲ್ಲಿ ಕಾಮಸೂತ್ರ ಎನ್ನುವಂಥ ಪುಸ್ತಕವನ್ನು ಕೊಡುವುದಕ್ಕೆ ಅವಕಾಶ ಇದೆಯಾ? ಇದರ ಬಗ್ಗೆ ದಯವಿಟ್ಟು ಉತ್ತರ ಕೊಡಬೇಕು. ನನ್ನ ಸ್ವಂತ ಹಳ್ಳಿಯಲ್ಲಿ ಇರುವ ಗ್ರಂಥಾಲಯದಲ್ಲಿ ಆ ಪುಸ್ತಕ ಇದೆ. ಅಲ್ಲಿ ಅದಕ್ಕೆ ಚೆನ್ನಾಗಿ ಬೈಂಡ್ ಹಾಕಿ ಇಟ್ಟುಕೊಂಡಿದ್ದಾರೆ. ನಾನು ತಮ್ಮನ್ನು ಕೇಳುತ್ತಿರುವುದು ಏನೆಂದರೆ ಆ ತರಹ ಪುಸ್ತಕಗಳನ್ನು ಕೊಡುವುದು ಬೇಡವೆಂದಾದರೂ ಯೋಚನೆ ಮಾಡಿ ಅಥವಾ ಕೊಡುತ್ತೇವೆ, ಅದರಿಂದ ಯುವಕರಿಗೆ ಅನುಕೂಲವಾಗುತ್ತದೆ ಎಂದರೆ ಅದನ್ನಾದರೂ ಹೇಳಿ. ಅದರ ಬಗ್ಗೆ ನಮ್ಮದು ಎರಡನೇ ಮಾತಿಲ್ಲ.

ಶ್ರೀ ಬಾಬುರಾವ್ ಚವ್ವಾಣ್: ಒಳ್ಳೆಯ ಪುಸ್ತಕಗಳನ್ನು ಕೊಡಬೇಕು ಎಂಬುದು ಸರ್ಕಾರದ ನೀತಿ. ಅಂತಹ ಪುಸ್ತಕ ಯಾವ ಗ್ರಂಥಾಲಯದಲ್ಲಿ ಬಂದಿದೆಯೆಂದು ತಾವು ಪತ್ರ ಕಳುಹಿಸಿಕೊಟ್ಟರೆ ಅದರ ಬಗ್ಗೆ ನಾನು ವಿಚಾರಣೆ ಮಾಡಿಸುತ್ತೇನೆ.

ಶ್ರೀ ಪಿ.ಹೆಚ್.ಪೂಜಾರ್: ಸನ್ಮಾನ್ಯ ಅಧ್ಯಕ್ಷರೆ, ಗ್ರಾಮಪಂಚಾಯತಿ ಬಗ್ಗೆ ನಿಯಮಾವಳಿ ಇರುವಂಥ ದಿಸೆಯಲ್ಲಿ ಒಂದು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಒಂದೇ ಒಂದು ಗ್ರಂಥಾಲಯ ಕೊಡಬೇಕೆಂದು ನಿಯಮಾವಳಿ ಏನಾದರೂ ರೂಪಿಸಲಾಗಿದೆಯಾ? ಕೆಲವೊಂದು ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಎರಡು-ಮೂರು ದೊಡ್ಡ ದೊಡ್ಡ ಗ್ರಾಮಗಳು ಇರುತ್ತವೆ. ಅಂತಹ ಕಡೆ ಎರಡೆರಡು ಗ್ರಂಥಾಲಯಗಳು ಇರುವುದನ್ನು ನಾವು ಕಂಡಿದ್ದೇವೆ. ಆ ರೀತಿ ಏನಾದರೂ ಅವಕಾಶ ಇದೆಯಾ? ಮೂರನೆಯದಾಗಿ ಗ್ರಾಮ ಪಂಚಾಯತಿಗಳಿಗೆ ಕಟ್ಟಡಗಳ ಸೌಲಭ್ಯ

ಇಲ್ಲ.....

ಅಧ್ಯಕ್ಷರು: ಒಬ್ಬರೇ ಮೂರು-ಮೂರು ಉಪಪ್ರಶ್ನೆಗಳನ್ನು ಕೇಳಿದರೆ ಹೇಗೆ? ಒಂದು ಪ್ರಶ್ನೆಯನ್ನು ಕೇಳುವ ಬದಲು ಮೂರು ಪ್ರಶ್ನೆಗಳನ್ನು ಕೇಳಿದರೆ ಎಷ್ಟು ಜನರಿಗೆ ನಾನು ಉತ್ತರ ಕೊಡಬೇಕು?

ಶ್ರೀ ಬಾಬುರಾವ್ ಚವ್ವಾಣ್ ಒಂದು ಗ್ರಾಮಪಂಚಾಯತಿಗೆ ಒಂದು ಗ್ರಂಥಾಲಯ ಕೊಡಬೇಕೆಂದು ಇದೆ. ಒಂದಕ್ಕಿಂತ ಹೆಚ್ಚು ಗ್ರಾಮಗಳಿಗೆ ಗ್ರಂಥಾಲಯ ಕೊಡತಕ್ಕಂಥ ವ್ಯವಸ್ಥೆ ನಮ್ಮಲ್ಲಿ ಇಲ್ಲ.

ಶ್ರೀ ಪಿ.ಕೃಷ್ಣಪ್ಪ: ಈ ಗ್ರಂಥಾಲಯಗಳಿಗೆ ಕಟ್ಟಡವನ್ನು ನೀವೇ ಒದಗಿಸುತ್ತೀರೋ ಅಥವಾ ಗ್ರಾಮಪಂಚಾಯ್ತಿಯವರು ಒದಗಿಸಬೇಕೋ?

ಶ್ರೀ ಬಾಬುರಾವ್ ಚವ್ವಾಣ್: ಶಾಸಕರ ನಿಧಿಯಿಂದ, ಲೋಕಸಭಾ ಸದಸ್ಯರ ನಿಧಿಯಿಂದ, ಗ್ರಾಮ ಪಂಚಾಯತಿಯಿಂದ ತಾವು ಕಟ್ಟಡ ಕಟ್ಟಿಸಿಕೊಟ್ಟರೆ ನಾವು ಗ್ರಂಥಾಲಯ ಮಂಜೂರು ಮಾಡಿಕೊಡುತ್ತೇವೆ. ಕಟ್ಟಡ ಕೊಟ್ಟು ಗ್ರಂಥಾಲಯ ಮಂಜೂರು ಮಾಡಿಕೊಡುವುದಕ್ಕೆ ನಮ್ಮಲ್ಲಿ ದುಡ್ಡು ಕಡಿಮೆ ಇದೆ. ಆದರೆ ತಮ್ಮ ನಿಧಿಯಿಂದ ಕಟ್ಟಡ ಮಾಡಿಕೊಟ್ಟರೆ ನಾವು ಗ್ರಂಥಾಲಯ ಮಂಜೂರು ಮಾಡುತ್ತೇವೆ.

ಶ್ರೀ ಪ್ರಕಾಶ್ ಖಂಡ್ರೆ: ಮಾನ್ಯ ಅಧ್ಯಕ್ಷರೇ, ನಾವು ನಮ್ಮ ಕ್ಷೇತ್ರಗಳ ಸಮಸ್ಯೆಗಳ ಬಗ್ಗೆ ಪ್ರಶ್ನೆ ರೂಪದಲ್ಲಿ ಇಲ್ಲಿ ಕೇಳಿದ್ದೇನೆ. ತಾವು ಸರಿಯಾದ ಉತ್ತರ ಕೊಡಿಸುತ್ತೇನೆ ಎಂದು ಆಶ್ವಾಸನೆ ಕೊಟ್ಟರೆ ನಾನು ಕೇಳುತ್ತೇನೆ.

ಅಧ್ಯಕ್ಷರು: ಮಾನ್ಯ ಮಂತ್ರಿಗಳಿಗೆ ಇದೇ ರೀತಿ ಉತ್ತರ ಕೊಡಬೇಕೆಂದು ನಾನು ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಪ್ರಕಾಶ್ ಖಂಡ್ರೆ: ಇದು ಇಬ್ಬರು ಮಂತ್ರಿಗಳಿಗೆ ಸಂಬಂಧಪಟ್ಟಂತೆ ಪ್ರಶ್ನೆ ಇದೆ. ಇವರು ಸರಿಯಾಗಿ ಉತ್ತರ ಕೊಡುತ್ತೇವೆ ಎಂದರೆ ನಾನು ಕೇಳುತ್ತೇನೆ.

ಅಧ್ಯಕ್ಷರು: ನೀವು ಮೊದಲು ಕೇಳಿ, ಆಮೇಲೆ ನೋಡೋಣ.

ಭಾಲ್ಕಿ ಪಟ್ಟಣದಲ್ಲಿ 100 ಹಾಸಿಗೆಗಳ ಆಸ್ಪತ್ರೆಯ ಕಟ್ಟಡದ ನಿರ್ಮಾಣದ ಬಗ್ಗೆ.

201(2417)